Planing for aerospace university

| | | | | | |
|---|---|---|---|---|---|
| Pub Date: | 01 Dec 2015 | Publication: | Sanjevani | Edition: | Bangalore |
| Journalist: | Bureau | Language: | Kannada | Page No.: | 3 |
| CCM: | 94.68 | MAV: | 60593.91 | Circulation | 100000 |



# ಬಾಹ್ಯಾಕಾಶ ವಿ.ವಿ. ಪ್ರಾರಂಭಕ್ಕೆ ಚಿಂತನೆ

ಬೆಂಗಳೂರು, ಡಿ.1: ನಾಗರಿಕ ವಿಮಾನಯಾನ ಕ್ಷೇತ್ರಕ್ಕೆ ರಾಜ್ಯ ಸರ್ಕಾರ ಎಲ್ಲ ರೀತಿಯ ಪ್ರೋತ್ಸಾಹ ನೀಡುತ್ತಿದ್ದು, ದೇವನಹಳ್ಳಿ ಬಳಿ 1000 ಎಕರೆ ಜಮೀನನ್ನು ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಮೀಸಲಿಡಲಾಗಿದೆ. ಇದರಲ್ಲಿ ಏರೋಸ್ಪೇಸ್ ವಿಶ್ವವಿದ್ಯಾಲಯ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ವಾರ್ತಾ, ಮೂಲಸೌಕರ್ಯ ಮತ್ತು ಹಜ್ ಖಾತೆ ಸಚಿವ ರೋಷನ್ ಬೇಗ್ ಹೇಳಿದ್ದಾರೆ.

ನಗರದಲ್ಲಿ ಏರ್ಪಡಿಸಿರುವ ಎರಡು ದಿನಗಳ "ಇಂಡಿ-ಯಾ ಎಂಆರ್‌ಒ ಏರೋಸ್ಪೇಸ್ ಆಂಡ್ ಡಿಫೆನ್ಸ್ ಎಕ್ಸ್ಪೋ"ಗೆ ಇಂದು ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ವಾಯುಯಾನ ಕ್ಷೇತ್ರದಲ್ಲಿ ದೇಶದ ರಾಜಧಾನಿಯಾಗಿದ್ದು, ದೇಶದಲ್ಲೇ ನಮ್ಮ ರಾಜ್ಯ ಪ್ರಥಮ ವಿಮಾನಯಾನ ನೀತಿಯನ್ನು ಹೊಂದಿದೆ. ಈ ನೀತಿ ರಾಜ್ಯದಲ್ಲಿ ವಿಮಾನಯಾನ ಕ್ಷೇತ್ರದ ಕೈಗಾರಿಕೆ ಬೆಳೆಯಲು ಹೆಚ್ಚು ಪೂರಕವಾಗಿದೆ. ಈ ನೀತಿ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತಿದೆ ಎಂದು ಹೇಳಿದರು.

ಕೈಗಾರಿಕೆಗಳ ಪರವಾನಿಗೆ ಶೀಘ್ರ ಇತ್ಯರ್ಥ್ಯಕ್ಕೆ ಏಕಗವಾಕ್ಷಿ ಯೋಜನೆ, ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ಮೂಲಸೌಕರ್ಯ ಒದಗಿಸಲು ಸರ್ಕಾರ ಉತ್ಸುಕವಾಗಿದ್ದು, ಪ್ರಸ್ತಾವನೆಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲಾಗುತ್ತಿದೆ ಎಂದು ಹೇಳಿದರು.

ಮೂಲಸೌಕರ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಮಾತನಾಡಿ, ಏರೋಸ್ಪೇಸ್ ಕ್ಷೇತ್ರದಲ್ಲಿ ಎಂಆರ್‌ಒ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯದಲ್ಲಿ ಉತ್ಕೃಷ್ಟ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಬೆಂಗಳೂರು ವಾಯುಯಾನ ಕ್ಷೇತ್ರದ ಸ್ವಾಭಾವಿಕ ಕೇಂದ್ರವಾಗಿದ್ದು, ಈ ಕ್ಷೇತ್ರದ ಉದ್ಯಮ ಬೆಳೆಯಲು ಪೂರಕವಾದ ವಾತಾವರಣ ಇದೆ. ಹೊಸ ಸಿವಿಲ್ ಏವಿಯೇಷನ್ ನೀತಿ ಜಾರಿಗೆ ಕೇಂದ್ರ ಮುಂದಾಗಿದೆ. ಈ ಕರಡಿನಲ್ಲಿ ಎಂಆರ್‌ಒ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ, ಈ ಕ್ಷೇತ್ರ ಸಮಸ್ಯೆಗಳ ನಿವಾರಣೆಗೆ ಒತ್ತು ನೀಡಬೇಕು ಎಂದು ಹೇಳಿದರು.

ಏರ್ ಇಂಡಿಯಾ ಸಂಸ್ಥೆಯ ಆಶಿಸ್‌ದಾಸ್ ಗುಪ್ತಾ ಮಾತನಾಡಿ, ಏರ್ ಇಂಡಿಯಾ ಇಂದಿನಿಂದ ದೆಹಲಿಯಿಂದ ಸ್ಯಾನ್ಸ್‌ಫ್ರಾನ್ಸಿಸ್ಕೊಗೆ ನೇರ ವಿಮಾನ ಹಾರಾಟ ನಡೆಯುತ್ತಿದೆ. ಇದು 16 ಗಂಟೆಗಳ ಪ್ರಯಾಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಏರೋಸ್ಪೇಸ್ ಕ್ಷೇತ್ರದ ಉದ್ಯಮಿಗಳಾದ ಭರತ್ ಮಲ್ಕಾನಿ, ಡಾ. ಮಿಲಿನ್, ರಂಗನಾಥನ್, ಜಗದೀಶ್ ಮತ್ತಿತರರು ಹಾಜರಿದ್ದರು.



ನಗರದಲ್ಲಿ ಆಯೋಜಿಸಿರುವ ವೈಮಾನಿಕ ಪ್ರದರ್ಶನದಲ್ಲಿ ಭಾಗಿಯಾಗಿರುವ ಯುವತಿಯರು.

* ಎರಡು ದಿನಗಳ ಸಮಾವೇಶ
* ವಿಮಾನಗಳ ನಿರ್ವಹಣೆ, ರಿಪೇರಿ ಕ್ಷೇತ್ರದ ಉದ್ಯಮಗಳು ಭಾಗಿ
* ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಗಳ ಕಂಪನಿಗಳ ಪಾಲುದಾರಿಕೆ
* ಮೇಕ್ ಇನ್ ಇಂಡಿಯಾ ಅಭಿಯಾನಕ್ಕೆ ಪೂರಕವಾಗಿ ಸಮಾವೇಶ